

# ಮರೆಯುವ ಮುನ್ನ

ವ್ಯವಸಾಯ ಮಾನವನ ಆರಂಭಿಕ ವೃತ್ತಿಗಳಲ್ಲಿ ಒಂದು. ಆದ್ದರಿಂದ ಇದನ್ನು 'ಆರಂಭ' ಎನ್ನುವರು. ಮಾನವ ವಿಕಾಸವಾಗುತ್ತಿದ್ದಂತೆ ಕೃಷಿಯಲ್ಲಿ ಅನೇಕ ಹಂತಗಳು ಬಂದವು. ಭೂಮಿಯನ್ನು ಹದಮಾಡುವುದು, ಬಿತ್ತನೆ, ಬೆಳೆಯ ಆರೈಕೆ, ಬೆಳೆಯ ಕೊಯ್ಲು, ಈ ಹಂತಗಳಲ್ಲಿ ನಾಡನೇಗಿಲು, ಕುಂಟೆ, ಗುದ್ದಲಿ, ಸನಿಕೆ, ಹಾರೆ ಹೀಗೆ ಅನೇಕ ಪರಿಕರಗಳು. ಕೊಯ್ಲಿನ ನಂತರ ಭೂಮಿಯನ್ನು ಗಟ್ಟಿಮಾಡಿ ಸಗಣಿ ಗಂಜಳದಿಂದ ಸಾರಿಸಿ ಗಟ್ಟಿಮಾಡಿಲಾಗುತ್ತಿತ್ತು ಇದನ್ನು 'ಕಣ' ಮಾಡುವುದು ಎನ್ನುತ್ತಿದ್ದರು. ಒಣಗಿದ ತೆನೆ ರಾಗಿ (ತಾಳು) ಪೈರನ್ನು ದೀರ್ಘ ವೃತ್ತಾಕಾರವಾಗಿ ಜೋಡಿಸಿ ಕಲ್ಲಿನ ಗುಂಡನ್ನು ಜೋಡೆತ್ತಿಗೆ ಕಟ್ಟಿ ತೆನೆಯ ಮೇಲೆ ಹರಿಸಲಾಗುತ್ತಿತ್ತು. ನೂರಾರು ಹೊರಳುಗಳ ನಂತರ ಪೈರಿನಿಂದ ಕಾಳು ಬಿಡುತ್ತಿತ್ತು. ಕೈಗಾರಿಕಾ ಕ್ರಾಂತಿಯ ನಂತರ ವ್ಯವಸಾಯಕ್ಕೆ ಹೊಸ ಹೊಸ ಪರಿಕರಗಳು ಬಂದವು ನಾಡ ನೇಗಿಲಿನ ಜಾಗವನ್ನು ಕಬ್ಬಿಣದ ನೇಗಿಲು ತುಂಬಿತು. ಗುಂಡಿನ ಜಾಗದಲ್ಲಿ ಟ್ರ್ಯಾಕ್ಟರ್ ಬಂತು. ಕಣಗಳು ಮರೆಯಾಗಿ ಬೆಳೆ ನಾಜೋಕು (ಕಂಗಾಣ) ಮಾಡಲು ರಸ್ತೆಗಳಲ್ಲಿ ವಾಹನ ರಬ್ಬರ್ ಚಕ್ರಗಳ ಕೆಳಗೆ ಹಾಕಲಾಗುತ್ತಿದೆ.

ಹಿಂದಿನ ವ್ಯವಸಾಯದ ಪರಿಕರಗಳನ್ನು ಮಕ್ಕಳಿಗೆ ಪರಿಚಯಿಸುವ ಸಲುವಾಗಿ ಚಿಕ್ಕಬಳ್ಳಾಪುರದ ಮಂಡಿಕಲ್ಲುವಿನ 'ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಈಚೆಗೆ 'ರಾಷ್ಟ್ರೀಯ ವಿಜ್ಞಾನ ದಿನ' ಆಚರಿಸಲಾಯಿತು. ಅಂದು 'ಜಾನಪದ ವಿಜ್ಞಾನ' ಎಂಬ ಹೆಸರಿನ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ನೂರಾರು ಮಕ್ಕಳು ಕಣ್ಣು ತುಂಬಿಸಿ ಕೊಂಡರು. ಸಂತಸದಿಂದ ಪಾಲ್ಗೊಂಡರು. ಮೇಲೆ ಹೇಳಿದ ಹಳೆಯ ಕಲ್ಲಿನ ಗುಂಡನ್ನು ಅನೇಕ ವರ್ಷಗಳಿಂದ ಶಾಲೆಯ ಮೈದಾನದಲ್ಲಿ ಸಂರಕ್ಷಿಸಿ ಇಡಲಾಗಿದೆ. ಅಲ್ಲಲ್ಲಿ ಮಣ್ಣಿನಲ್ಲಿ ಹೂತು ಹೋಗುತ್ತಿರುವ ಇಂಥ ಪರಿಕರಗಳನ್ನು ಸಂರಕ್ಷಿಸಿ ನಮ್ಮ ಮುಂದಿನ ಪೀಳಿಗೆಗೆ ಪರಿಚಯಿಸುವುದರ ಜೊತೆಗೆ 'ವ್ಯವಸಾಯ ಸಂಸ್ಕೃತಿ'ಯನ್ನು ರಕ್ಷಿಸಬೇಕಾಗಿದೆ.

—ಡಿ.ಆರ್.ವೇಣುಗೋಪಾಲ್, ಮಂಡಿಕಲ್ಲು



# ಅಪರೂಪದ ಕಲ್ಲು

ಬಾಗಲಕೋಟೆ ಹತ್ತಿರವಿರುವ ಪಟ್ಟದಕಲ್ಲು ಐತಿಹಾಸಿಕ ಸ್ಥಳವಾಗಿದೆ. ಇಲ್ಲಿ ಎಲ್ಲ ಕಾಣುವುದು ಬರಿ ಕಲ್ಲಿನ ವಸ್ತುಗಳೆ. ಅನೇಕ ದೇವಾಲಯಗಳು ಹಾಗೂ ಮೂರ್ತಿಗಳು ಕಲ್ಲಿನಲ್ಲಿ ನಿರ್ಮಿತವಾದವು. ಈ ಚಿತ್ರದಲ್ಲಿರುವುದು ನೋಡಿದರೆ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಯ ಬೃಂದಾವನದ ಹಾಗೆ ಕಾಣುತ್ತದೆ. ಆದರೆ ಇದು ಬೃಂದಾವನವೊ ಅಥವಾ ದೇವರ ಮೂರ್ತಿಯೊ ತಿಳಿಯದಾಗಿದೆ. ನೋಡಲು ನುಣುಪಾಗಿರುವ ಈ ಕಲ್ಲು ಎಂಟನೆಯ ಶತಮಾನದಲ್ಲಿ ಕೆತ್ತಿ ನಿಲ್ಲಿಸಲಾಗಿದೆ. ಈಗಲೂ ಈ ಕಲ್ಲು ಗಟ್ಟಿಯಾಗಿ ನಿಂತಿದೆ ಅಲುಗಾಡಿಸಿದರೂ ಅಲುಗಾಡುವುದಿಲ್ಲ. ಅದೇ ಈ ಕಲ್ಲಿನ ವಿಶೇಷ.

—ಜಗದೀಶ ಎಂ ಸಂಗಣ್ಣವರ, ಬೆಳಗಾವಿ



